ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

14

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 22/4/2021

ವೈದ್ಯಾಧಿಕಾರಿಗಳಿಂದ ಮರಣ ಪ್ರಮಾಣ ಪತ್ರ ಕಡ್ಡಾಯ

# ಕೋವಿಡ್ ಶವ ಸಂಸ್ಕಾರಕ್ಕೆ ನಿಯಮ

■ **ವಿಕ ಸುದ್ದಿಲೋಕ** ಬೆಂಗಳೂರು 22/4/21

ಕೋವಿಡ್ ಮೃತ ದೇಹವನ್ನು ನಿರ್ವಹಿಸುವ ಸಿಬ್ಬಂದಿ ಮುನ್ನೆಚ್ಚರಿಕೆ ಕ್ರಮಗಳಾದ ಸರ್ಜಿಕಲ್ ಮಾಸ್ಕ್, ಕೈಗವಸು, ಪಿಪಿಇ ಕಿಟ್ ಧರಿಸಿಕೊಳ್ಳುವುದು ಕಡ್ಡಾಯವಾಗಿದೆ. ಮೃತದೇಹ ವರ್ಗಾವಣೆ ಮಾಡಿದ ನಂತರ ಆ ವಾಹನವನ್ನು ಶವಸಂಸ್ಕಾರ ಸಿಬ್ಬಂದಿ ಶೇ.1 ಸೋಡಿಯಂನೊಂದಿಗೆ ಹೈಪೋಕ್ಲೋರೈಟ್ ದ್ರಾವಣದಿಂದ ಶುದ್ಧಮಾಡಬೇಕು. ಶವಸಂಸ್ಕಾರಕ್ಕೂ ಮುನ್ನ ವೈದ್ಯಾಧಿಕಾರಿಗಳಿಂದ ಮರಣ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿದೆ.

ಪೂರ್ಣ ಪಿಪಿಇ ಕಿಟ್ ಧರಿಸಿದ ವ್ಯಕ್ತಿ ಅಂತ್ಯಕ್ರಿಯೆ ನಡೆಸಬೇಕು. ದಹನ ಪೂರ್ಣಗೊಂಡ ನಂತರ, ಕೈಗವಸುಗಳನ್ನು ತೆಗೆದು, ಸೋಪ್ ಮತ್ತು ನೀರಿನಿಂದ ಕೈಗಳನ್ನು ತೊಳೆಯಬೇಕು.

ದೇಹದ ಚೀಲದ ಮುಖದ ತುದಿಯನ್ನು ಅನ್ ಜಿಪ್ ಮಾಡುವ ಮೂಲಕ ಮೃತ ದೇಹವನ್ನು ಸಂಬಂಧಿಕರು, ಸ್ನೇಹಿತರ, ಹಿತೈಷಿಗಳು ನೋಡಬಹುದು. ಈ ಸಮಯದಲ್ಲೂ ಕೋವಿಡ್ ಮುನ್ನೆಚ್ಚರಿಕೆ ಕಾಪಾಡುವುದು ಕಡ್ಡಾಯವಾಗಿದೆ. ದೇಹದ ಸ್ಪರ್ಶದ ಅಗತ್ಯವಿಲ್ಲದ ಯಾವುದೇ ಕೊನೆಯ ವಿಧಿಗಳನ್ನು ಮಾಡಬಹುದು. ಸ್ನಾನ ಮಾಡುವುದು, ತಬ್ಬಿಕೊಳ್ಳುವುದು, ಅಪ್ಪಿಕೊಳ್ಳುವುದು ಇತ್ಯಾದಿ ಭಾರತೀಯ ಸಂಪ್ರದಾಯದ ಪದ್ಧತಿಯಂತೆ ಮಾಡುವಂತಿಲ್ಲ.

ಶವ ಸಂಸ್ಕಾರದ ಬೂದಿ ಯಾವುದೇ ಅಪಾಯವನ್ನುಂಟು ಮಾಡುವುದಿಲ್ಲ ಮತ್ತು ಅದನ್ನು ಸಂಗ್ರಹಿಸಬಹುದು. ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಅಂತ್ಯಕ್ರಿಯೆಯಲ್ಲಿ ಸರಕಾರ ಹೊರಡಿಸಿದ ಮಾರ್ಗಸೂಚಿಯಂತೆ ಕೇವಲ 20 ಜನರಿಗೆ ಮಾತ್ರ ಅವಕಾಶ ನೀಡಬೇಕು. ಮಕ್ಕಳು ಮತ್ತು 60 ವರ್ಷಕ್ಕಿಂತ ಹೆಚ್ಚು ವಯಸ್ಸಿನ ವೃದ್ಧರು ಮತ್ತು ಉಸಿರಾಟ ತೊಂದರೆ ಇರುವವರು ಕಡ್ಡಾಯವಾಗಿ ವೈದ್ಯಕೀಯ ಮಾಸ್ಕ್ ಧರಿಸಬೇಕು ಮತ್ತು ಕಟ್ಟುನಿಟ್ಟಾದ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಎಂದು ಸೂಚಿಸಲಾಗಿದೆ.